ಕ್ವಿಂಟಾಲ್‌ಗೆ 3,840/– ಹಾಗೂ ಮಿಲ್ಲಿಂಗ್ ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ ರೂ.3,590/– ಗಳ ಬೆಂಬಲ ಬೆಲೆಯನ್ನು ನಿಗದಿಪಡಿಸಿದೆ.

ಆ) ಹೌದು.

ಇ) ರಾಜ್ಯ ಸರ್ಕಾರ ರೈತರ ಹಿತದೃಷ್ಟಿಯಿಂದ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ರೈತರು ತಂದ ಕೊಬ್ಬರಿಯನ್ನು ಟೆಂಡರ್ / ಹರಾಜು ಮುಖಾಂತರ ಗರಿಷ್ಠ ರೂ.4700 ಕ್ಕಿಂತ ಕಡಿಮೆ ಬೆಲೆಗೆ ಮಾರಾಟವಾದಾಗ ವ್ಯತ್ಯಾಸದ ಹಣವನ್ನು ಪರಿಹಾರವಾಗಿ ಗರಿಷ್ಠ ರೂ.600.00 ರವರೆಗೆ ದಿನಾಂಕ : 11.1.2007 ರಿಂದ 24.1.2007 ರವರೆಗೆ ನೀಡಿದೆ.

ಈ) ಟೆಂಡರ್ ಅಥವಾ ಹರಾಜಿನಲ್ಲಿ ಕೊಬ್ಬರಿ ಖರೀದಿಸಿದಲ್ಲಿ ಹಣ ಪಾವತಿಸುವಂತೆ ಸೂಚಿಸಲಾಗಿದೆ.

ಉ) ನಾಫೆಡ್ ಮೂಲಕ ಕೊಬ್ಬರಿ ಖರೀದಿಸಲು ಸರ್ಕಾರ ವ್ಯವಸ್ಥೆ ಮಾಡಿದೆ. ದಿನಾಂಕ: 30.1.2007ರಿಂದ ತಿಪಟೂರು, ತುರುವೇಕೆರೆ, ಅರಸೀಕೆರೆ, ನಾಗಮಂಗಲ, ಚನ್ನರಾಯಪಟ್ಟಣ, ಗುಬ್ಬಿ ಮಾರುಕಟ್ಟೆ ಪ್ರಾಂಗಣದಲ್ಲಿ ನಾಫೆಡ್ ಸಂಸ್ಥೆಯವರು ಖರೀದಿ ಕೇಂದ್ರಗಳನ್ನು ಸ್ಥಾಪಿಸಿ ಕೊಬ್ಬರಿಯನ್ನು ಖರೀದಿಸಲು ಆರಂಭಿಸಿರುತ್ತಾರೆ.

ಊ) ಮೇಲಿನ ಪ್ರಶ್ನೆಗಳಿಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

669 (413) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2006-07ನೇ ಸಾಲಿನಲ್ಲಿ ಅತಿವೃಷ್ಟಿ / ಅನಾವೃಷ್ಟಿಯಿಂದ ಎಷ್ಟು ವಿಸ್ತೀರ್ಣಕ್ಕೆ ಬೆಳೆ ವಿಮೆ ನಿಗದಿಪಡಿಸಲಾಗಿದೆ ;

ಆ) ಬೆಳೆ ವಿಮೆ ಪಡೆದ ರೈತರ ಸಂಖ್ಯೆ ಎಷ್ಟು ;

ಇ) ಬೆಳೆ ವಿಮೆಗೆ ಸರ್ಕಾರ ಬಿಡುಗಡೆಗೊಳಿಸಿದ ಅನುದಾನವೆಷ್ಟು;

ಈ) ಚಾಮರಾಜನಗರ ಜಿಲ್ಲೆಗೆ 2006-07ನೇ ಸಾಲಿನಲ್ಲಿ ಅತಿವೃಷ್ಟಿ / ಅನಾವೃಷ್ಟಿಯಿಂದ ಎಷ್ಟು ವಿಸ್ತೀರ್ಣಕ್ಕೆ ಬೆಳೆ ವಿಮೆ ಸೀಮಿತವಾಗಿದೆ;

ಉ) ಚಾಮರಾಜನಗರ ಜಿಲ್ಲೆಯಲ್ಲಿ ಬೆಳೆ ವಿಮೆ ಪಡೆದ ರೈತರ ಸಂಖ್ಯೆ ಎಷ್ಟು ;

ಊ) ಚಾಮರಾಜನಗರ ಜಿಲ್ಲೆಗೆ ಬೆಳೆ ವಿಮೆಗೆ ಬಿಡುಗಡೆಯಾದ ಅನುದಾನವೆಷ್ಟು ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) :

ಅ) 2006–07ನೇ ಮುಂಗಾರು ಹಂಗಾಮಿನಲ್ಲಿ 15.83 ಲಕ್ಷ ಹೆಕ್ಟೇರ್ ಪ್ರದೇಶವನ್ನು ಬೆಳೆ ವಿಮೆಗೆ ಒಳಪಡಿಸಲಾಗಿದೆ.

ಆ) ಸದರಿ ಹಂಗಾಮಿನಲ್ಲಿ ಬೆಳೆ ವಿಮೆ ಯೋಜನೆಯಲ್ಲಿ 7.88 ಲಕ್ಷ ರೈತರು ಪಾಲ್ಗೊಂಡಿರುತ್ತಾರೆ.

ಇ) ವಿಮಾ ಸಂಸ್ಥೆಯು 2006–07ನೇ ಸಾಲಿನಲ್ಲಿ ಬೆಳೆ ವಿಮಾ ನಷ್ಟ ಪರಿಹಾರ ಲೆಕ್ಕ ಹಾಕಿದ ನಂತರ ಮಾತ್ರ ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆ ಮಾಡಬೇಕಾದ ವಿವರಗಳು ಲಭ್ಯವಾಗಲಿದೆ.

ಈ) ಚಾಮರಾಜನಗರ ಜಿಲ್ಲೆಯಲ್ಲಿ 2006–07ರ ಮುಂಗಾರು ಹಂಗಾಮಿನಲ್ಲಿ 21,918 ಹೆಕ್ಟೇರ್ ಪ್ರದೇಶವನ್ನು ಬೆಳೆ ವಿಮೆಗೆ ಒಳಪಡಿಸಲಾಗಿದೆ.

ಉ) ಈ ಹಂಗಾಮಿನಲ್ಲಿ ಒಟ್ಟು 19,619 ರೈತರು ಈ ಯೋಜನೆಯಲ್ಲಿ ಪಾಲ್ಗೊಂಡಿರುತ್ತಾರೆ.

ಊ) ಬೆಳೆ ನಷ್ಟ ಪರಿಹಾರ ಲೆಕ್ಕ ಹಾಕಿದ ನಂತರ ಬಿಡುಗಡೆ ಮಾಡಬೇಕಾದ ಅನುದಾನದ ವಿವರಗಳು ಲಭ್ಯವಾಗಲಿದೆ.

670 (414) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತಸಂಪರ್ಕ ಕೇಂದ್ರಗಳಿಗೆ ಆನ್‌ಲೈನ್ ಸೌಲಭ್ಯ ಒದಗಿಸುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ;

ಆ) ರೈತಸಂಪರ್ಕ ಕೇಂದ್ರಗಳಿಗೆ ಏಕ ಗವಾಕ್ಷಿ ಯೋಜನೆ ಜಾರಿಗೊಳಿಸುವ ಯೋಚನೆ ಸರ್ಕಾರಕ್ಕಿದೆಯೇ(Single Window System) ;

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) –

ಅ) ಎಲ್ಲಾ ರೈತಸಂಪರ್ಕ ಕೇಂದ್ರಗಳಿಗೆ ಇಂಟರ್‌ನೆಟ್ ಸೌಲಭ್ಯ ಪಡೆಯಲು ಮಂಜೂರಾತಿ ನೀಡಲಾಗಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.